ಕರ್ನಾಟಕ ಗೃಹ ಮಂಡಳಿಯ ಮಂಗಳೂರು ವಿಭಾಗದ ಕಛೇರಿಯನ್ನು ಹಾಸನಕ್ಕೆ ಬದಲಾಯಿಸುವ ಬಗ್ಗೆ

೬೯. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕರ್ನಾಟಕ ಗೃಹ ಮಂಡಳಿಯ ಮಂಗಳೂರಿನ ವಿಭಾಗೀಯ ಕಛೇರಿಯನ್ನು ಹಾಸನಕ್ಕೆ ಸ್ಥಳಾಂತರಿಸುವುದರ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನವರು ಪ್ರತಿಭಟಿಸಿರುವುದು ನಿಜವೇ ?

ಆ) ನಿಜವಿದ್ದಲ್ಲಿ ಸರ್ಕಾರವು ಕರ್ನಾಟಕ ಗೃಹ ಮಂಡಳಿಯ ಮಂಗಳೂರಿನ ವಿಭಾಗೀಯ ಕಛೇರಿಯನ್ನು ಸ್ಥಳಾಂತರಿಸದೇ ಇರುವುದಕ್ಕೆ ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್.ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ ಅಧ್ಯಕ್ಷರಿಂದ ದಿನಾಂಕ ೨೭.೧೧.೮೯ ರಂದು ಕರ್ನಾಟಕ ಗೃಹ ಮಂಡಳಿಯ ಮಂಗಳೂರಿನ ವಿಭಾಗೀಯ ಕಛೇರಿಯನ್ನು ಸ್ಥಳಾಂತರಿಸಬಾರದೆಂದು ತಂತಿ ಸಂದೇಶ ಬಂದಿರುವುದು ನಿಜ.

ಆ) ಕರ್ನಾಟಕ ಗೃಹ ಮಂಡಳಿಯ ವಿಭಾಗದ ಕಛೇರಿಯನ್ನು ಮಂಗಳೂರಿನಲ್ಲಿಯೇ ಮುಂದುವರಿಸುವುದು.

ಕೆಹೆಚ್‌ಬಿ ಕಾಲೋನಿಯಲ್ಲಿನ ಮನೆಗಳ ಬೆಲೆಯ ಏರಿಕೆ ಬಗ್ಗೆ

೬೯. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ವಸತಿ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯು ಹಂಚಿಕೆದಾರರಿಂದ ಪಡೆದ ಮುಂಗಡ ಠೇವಣಿಯೆಷ್ಟು,

ಆ) ಮನೆಹಂಚಿಕೆಯಾಗದ ಅರ್ಜಿದಾರರ ಒಟ್ಟು ಸಂಖ್ಯೆ ಎಷ್ಟು,

ಇ) ಮನೆಗಳ ಹಂಚಿಕೆಗೆ ಅರ್ಜಿ ಕರೆದಾಗ ನಮೂದಿಸಿದ ಮನೆಗಳ ಬೆಲೆಯು ಪ್ರತಿಯೊಂದು ವರ್ಗದ ಮನೆಗಳಿಗೂ ಮನೆಗಳನ್ನು ಹಂಚಿಕೆ ಮಾಡುವಾಗ ಹಿಂದೆ ನಮೂದಿಸಿದ ಬೆಲೆಗಿಂತ ಹೆಚ್ಚಾಗಿರುವುದು ನಿಜಾಂಶವಾಗಿದೆಯೆ,

ಈ) ಹಾಗಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಂಚಿಕೆದಾರರಿಂದ ಮನೆಗಳಿಗೆ ಹೆಚ್ಚಾಗಿರುವ ಬೆಲೆಯನ್ನು ಕೇಳಿರುವವರ ಸಂಖ್ಯೆ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ರೂ. ೧,೬೨,೬೦,೬೪೦-೬೦

ಆ) ೫೦೭.

ಇ) ಹೌದು.

ಈ) ೧೨೦೩.

ಉಡುಪಿ ಪುರಸಭೆಯು ಅಜ್ಜರಕೇಡದಲ್ಲಿ ಕ್ರೀಡಾಂಗಣ ನಿರ್ಮಿಸುವ ಬಗ್ಗೆ

೬೬. ಶ್ರೀಮತಿ ಮನೋರಮಾ ಮಧ್ವರಾಜ್, (ಉಡುಪಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಪುರಸಭೆಯು ಅಜ್ಜರಕೇಡದಲ್ಲಿ ಕ್ರೀಡಾಂಗಣ ನಿರ್ಮಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆರ್ಥಿಕ ನೆರವು ಕೋರಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ,